






ಕೆಥೆಡ್ರಲ್ ಗೋಪುರದ ಮುಂದೆ ಲೇಖಕಿ

ಬಿಎಂಡಬ್ಲ್ಯು ಮ್ಯೂಸಿಯಂ

ಅವನಿಗೆ. 'ಎಲ್ಲಿಗೆ ಹೋಗ್ತೀಯಾ' ಎಂದು ನನ್ನ ಕೇಳಿದ. 'ಮ್ಯೂನಿಕ್'ಎಂದೆ. ತಕ್ಷಣ 'ಓ, ಮ್ಯೂನಿಕ್...ಯೂ ಆರ್ ಮ್ಯೂನ್ಷೆನರ್....ಓ ಲಕ್ಕಿ...' ಎನ್ನುವಾಗ ಅವನ ಕಣ್ಣಲ್ಲಿ ಕನಸುಗಳು ಕುಣಿಯುತ್ತಿತ್ತು.

ಈ ಘಟನೆ ಯಾಕೆಂದರೆ, ಜರ್ಮನ್ನರಿಗೆ ಮ್ಯೂನಿಕ್ ಎನ್ನುವುದು ಸ್ವರ್ಗದಂತೆ. ಅಲ್ಲಿ ಬದುಕು ಕಟ್ಟಿಕೊಳ್ಳುವ ಆಸೆ ಬಹುಮಂದಿಗೆ. ಆದರೆ, ಮ್ಯೂನಿಕ್ ದುಬಾರಿನಗರ. ಚಂದದ ದುಡಿಮೆ ಇದ್ದರೆ ಸ್ವರ್ಗ, ಇಲ್ಲದಿರೆ ಕೇವಲ ಕನಸು. ಜರ್ಮನಿಯ ಬವೇರಿಯಾ ರಾಜ್ಯದ ರಾಜಧಾನಿಯಾದ ಮ್ಯೂನಿಕ್ ಅನ್ನು ಅಲ್ಲಿನವರು ಪ್ರೀತಿಯಿಂದ 'ಮ್ಯೂನ್ಷೇನ್' ಎನ್ನುತ್ತಾರೆ. 'ಐ ಆ್ಯಮ್ ಎ ಮ್ಯೂನ್ಷೇನರ್' ಎಂದು ಹೆಮ್ಮೆಯಿಂದ ಎದೆಯುಬ್ಬಿಸುತ್ತಾರೆ.

ಮ್ಯೂನಿಕ್ ಹೀಗೆ ಹೆಮ್ಮೆ ಪಡುವಂತೆಯೇ ಇದೆ. ಸಾವಿರ ವರ್ಷಕ್ಕೂ ಮೀರಿದ ಇತಿಹಾಸವಿರುವ ಈ ಮಧ್ಯಕಾಲೀನ ನಗರ, ಮಾಂಕ್‌ಗಳಿಂದ ಮೊದಲುಗೊಂಡು ಅನೇಕ ಡ್ಯೂಕ್ ಸಂತತಿಗಳನ್ನೂ ಕಂಡಿದೆ. ದೊರೆಗಳ ಕಾಲದ ಸ್ವರ್ಣವೈಭವವನ್ನು ಉಂಡಂತೆ, ಸರ್ವಾಧಿಕಾರಿ ಹಿಟ್ಲರ್‌ನ ಕ್ರೂರಾಡಳಿತಕ್ಕೂ ಸಾಕ್ಷಿಯಾಗಿದೆ. ಪ್ರಾಚೀನ ವೈಭವಗಳನ್ನು ಎರಡು ಮಹಾಯುದ್ಧಗಳಲ್ಲಿ ಇನ್ನಿಲ್ಲದಷ್ಟು ತರ್ಪಣವಾಗಿಸಿಕೊಂಡರೂ, ಎಲ್ಲವನ್ನೂ ಕೊಡಹಿ ಎದ್ದು ಅತ್ಯಾಧುನಿಕವಾಗಿ, ಸರ್ವಾಂಗೀಣ ಸುಂದರಿಯಾಗಿ ಮಾರ್ಪಟ್ಟಿದೆ. ಅಳಿದುಳಿದ ಪ್ರಾಚೀನತೆಯನ್ನು ಜತನದಿಂದ ಕಾಪಾಡಿಕೊಂಡಿದೆ, ಬವೇರಿಯನ್ನರ ಸಂಸ್ಕೃತಿಯನ್ನು ಇನ್ನೂ ಕಾಳಜಿಯಿಂದ ರಕ್ಷಿಸಿಟ್ಟುಕೊಂಡಿದೆ. ಅದಕ್ಕೇ ಈ ನಗರವನ್ನು 'ಲ್ಯಾಪ್‌ಟಾಪ್ ಎಂಡ್ ಲೇಡರ್‌ಹೋಸೆನ್ ಸಿಟಿ..' ಎನ್ನುತ್ತಾರೆ. ನಿಜ, ಆಧುನಿಕ ತಂತ್ರಜ್ಞಾನ ಮತ್ತು